**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**

**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 69/2014

ಪಿಡಬ್ಲು :3 ಸಿಡಬ್ಲು :3

ಸಾಕ್ಷಿಯ ಹೆಸರು : ಶ್ರೀಮತಿ. ಶೋಭಾ ರಾಜು ಕದಮ

ಗಂಡನ ಹೆಸರು : ಶ್ರೀ. ರಾಜು ಕದಮ

ವಯಸ್ಸು : 36 ವರ್ಷ

ಉದ್ಯೋಗ : ಗೃಹಿಣಿ

ವಾಸ್ತವ್ಯ : ಇಂಚಲಕರಂಜಿ

ದಿನಾಂಕ : 30-11-2024 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**EBC ದೋಷಾರೋಪಣೆ ಹೊರಿಸುವ ಮುಂಚೆ ಸಾಕ್ಷಿದಾರರ ಮುಖ್ಯ ವಿಚಾರಣೆ**

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಈ ಪ್ರಕರಣದ ಪಿರ್ಯಾದಿ ಬಾಬಾಸಾಬ ದೊಂಡಿಬಾ ಶೇರಖಾನೆ ನನ್ನ ಅಣ್ಣನಾಗಿದ್ದು, ಆತ ಈಗ ಜೀವಂತ ಇರುವುದಿಲ್ಲ, ಆತನು 2018 ನೇ ಇಸವಿಯಲ್ಲಿ ಅಪಘಾತದಲ್ಲಿ ಮೃತಪಟ್ಟಿರುತ್ತಾನೆ. ಸಾಕ್ಷಿದಾರ ನಂಬರ 1 ಬಾಬಾಸಾಬ ದೊಂಡಿಬಾ ನನ್ನ ಅಣ್ಣ, ಸಾಕ್ಷಿದಾರಳಾರದ ಮಂಜುಳಾ ಶೇರಖಾನೆ ನನ್ನ ತಾಯಿ, ಸಾಕ್ಷಿದಾರರಾದ ಪ್ರಕಾಶ ಪೋಪಟ ನನ್ನ ಅಣ್ಣ. ಈ ಪ್ರಕರಣದ ಎಲ್ಲಾ ಆರೋಪಿತರು ಪರಿಚಯ. ನನ್ನದು ಹಿಂದೂ ಡೋರ ಜಾತಿಯಾಗಿರುತ್ತದೆ. ಸದರಿ ಹಿಂದೂ ಡೋರ ಜಾತಿ ಪರಿಶಿಷ್ಟ ಜಾತಿ ಅಡಿಯಲ್ಲಿ ಬರುತ್ತದೆ. ಈ ಪ್ರಕರಣದ 1, 2, 6 ಮತ್ತು 7 ಆರೋಪಿತರು ಹಿಂದೂ ಕುರುಬರ ಜಾತಿಯವರಾಗಿರುತ್ತಾರೆ. ಈ ಪ್ರಕರಣದ 3 ರಿಂದ 5 ನೇ ಆರೋಪಿತರು ಹಿಂದೂ ಲಿಂಗಾಯತ ಜಾತಿಯವರಾಗಿರುತ್ತಾರೆ. ನಮ್ಮ ಮನೆಯು ಕವಲುಗುಡ್ಡ ಗ್ರಾಮದ ಸರ್ವೇ ನಂಬರ ಜಮೀನಿನಲ್ಲಿ ಇರುತ್ತದೆ. ಸದರಿ ಮನೆಯಲ್ಲಿ ನನ್ನ ತಾಯಿ ಹಾಗೂ ನನ್ನ ಅಣ್ಣನ ಕುಟುಂಬ ಮತ್ತು ಆತನ ಹೆಂಡತಿ ಮಕ್ಕಳು

ಒಟ್ಟಾಗಿ ವಾಸವಾಗಿರುತ್ತಾರೆ. ಈಗ 12 ವರ್ಷಗಳ ಹಿಂದೆ ನನ್ನ ಅಣ್ಣ ಬಾಬಾಸಾಬ ದೊಂಡಿಬಾ ಶೇರಖಾನೆ ಸಂಜೆ 4 ಗಂಟೆ ಸುಮಾರಿಗೆ ಮನೆಯಲ್ಲಿದ್ದೇವು, ಆಗ ಭೀಮಗೌಂಡ ಗಾಳಿ ಬಂದು ನಮ್ಮ ಅಣ್ಣನನ್ನು ಹೊರಗೆ ಕರೆದರು. ಆಗ ಸೈದು ಬಂಡಗಾರ, ಮಹಾದೇವ ಬಂಡಗಾರ, ಮಾಯವ್ವಾ ಬಂಡಗಾರ ಮತ್ತು ಇನ್ನೂ 4 ಜನರು ಅಲ್ಲಿಗೆ ಬಂದಿದ್ದರು. ಚೆನ್ನಬಸ್ಸು ಗೌಡರವರು ನಮ್ಮ ಊರಿನ ಗೌಡರು ಇರುತ್ತಾರೆ. ಅವರ ವಿರುದ್ಧ ಕೇಸನ್ನು ವಾಪಸ್ ಪಡೆಯಬೇಕು, ನೀವು ಡೋರ ಸೂಳೆಮಕ್ಕಳಿದ್ದೀರಾ ಎಂದೆಲ್ಲಾ ಹೇಳಿ, ನನ್ನ ಅಣ್ಣ ಬಾಬಾಸಾಬನಿಗೆ ಹೊಡೆಯಲು ಶುರು ಮಾಡಿದರು, ನನ್ನ ತಾಯಿ ನನ್ನ ಮಗನಿಗೆ ಯಾಕೆ ಹೊಡೆಯಿುತ್ತೀರಿ ಎಂದು ಕೇಳಿದೇಳು ಆಗ ಅವರು ನನ್ನ ತಾಯಿಯ ಸೀರೆ, ಜುಟ್ಟು ಹಿಡಿದು ಎಳೆದಾಡಿ ಅವಮಾನ ಮಾಡಿದರು. ನಾನು ಬಂದು ನನ್ನ ತಾಯಿ, ನನ್ನ ಅಣ್ಣನಿಗೆ ಯಾಕೆ ಬಡಿಯುತ್ತೀರಿ ಎಂದು ಕೇಳಿ ಬಿಡಿಸಿಕೊಂಡೇನು. ನನ್ನ ತಾಯಿ ಮತ್ತು ಅಣ್ಣನನ್ನು ಕಾಗವಾಡ ಠಾಣೆಗೆ ಪಿರ್ಯಾದಿಯನ್ನು ಕೊಡಲು ಕಳುಹಿಸಿಕೊಟ್ಟೇನು. ನಂತರ ನನಗೆ ವಿಷಯ ಗೊತ್ತಾಗಿದ್ದೇನೆಂದರೆ ಆ ದಿನ ಠಾಣೆಯಲ್ಲಿ ಹಾಜರಿದ್ದ ಪಿ.ಎಸ್.ಐ ರವರು ಅವರಿಗೆ ಹೇಳಿದ್ದೇನೆಂದರೆ ಚೆನ್ನಬಸ್ಸು ಗೌಡರವರು ಊರಿನ ಗೌಡರಿದ್ದಾರೆ ನೀವು ಡೋರ ಸೂಳೆ ಮಕ್ಕಳಿದ್ದಿರಿ ಅವರಿಗೆ ನಾನೇ ಹಚ್ಚಿಕೊಟ್ಟಿದ್ದೇನೆ ಅಂತಾ ಹೇಳಿದರು. ನಿಮ್ಮ ಅರ್ಜಿಯನ್ನು ತೆಗೆದುಕೊಳ್ಳುವುದಿಲ್ಲ ಹಾಗೂ ನಿಮ್ಮ ಮೇಲೆ ಸುಳ್ಳು ಪಿರ್ಯಾದಿ ಕೊಟ್ಟು ನಿಮಗೆ ಶಿಕ್ಷೆ ಮಾಡಿಸುತ್ತೇವೆ ಎಂದೆಲ್ಲಾ ಅಂದಿರುತ್ತಾರೆ ಎಂದು ಗೊತ್ತಾಯಿತು. ನಂತರ ಎಸ್.ಪಿ ಬೆಳಗಾವಿರವರ ಹತ್ತಿರ ದೂರು ಕೊಡಲು ಹೋಗಿದ್ದು, ಸದರಿಯವರೂ ಸಹ ದೂರನ್ನು ಸ್ವೀಕರಿಸಿರುವುದಿಲ್ಲ ಎಂದು ಗೊತ್ತಾಯಿತು. ಆದ ಕಾರಣ ನನ್ನ ಅಣ್ಣ ಬಾಬಾಸಾಬ ಈ ನ್ಯಾಯಾಲಯದ ಮುಂದೆ ಬಂದು ಖಾಸಗಿ ದೂರನ್ನು ದಾಖಲು ಮಾಡಿರುತ್ತಾರೆ.

2. ನಾವು ಡೋರ ಜಾತಿಗೆ ಸೇರಿದವರೆಂದು ಈ ಪ್ರಕರಣದ ಆರೋಪಿತರೆಲ್ಲರಿಗೂ ಗೊತ್ತಿರುತ್ತದೆ. ಸದರಿ ಆರೋಪಿತರನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಚೆನ್ನಪ್ಪ ಗೌಡ)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.